

ಒಮ್ಮೆ ಲಾರಾಳ ‘ಪಾ’ನಿಗೆ ಹೊಲಮನೆಯ ಕೆಲಸಕ್ಕಾಗಿ ಕುದುರೆಗಳನ್ನು ಕೊಳ್ಳಬೇಕಾಗಿರುತ್ತದೆ. ಆ ಬಾರಿ ಲಾರಾ, ಮೇರಿ ಕ್ರಿಸ್‌ಮಸ್ ಬಗ್ಗೆ ಮಾತನಾಡುವಾಗ ‘ಮಾ’ ಅವರ ಹತ್ತಿರ ಕೇಳುತ್ತಾಳೆ. ‘ಮಕ್ಕಳೇ ನಿಮಗೇನು ಬೇಕು?’. ಉದ್ದ ಪಟ್ಟಿ ನೀಡುತ್ತಾರೆ ಪುಟಾಣಿಗಳು. ಆಗ ಮಾ ಕೇಳುತ್ತಾಳೆ “ಕ್ರಿಸ್‌ಮಸ್‌ಗೆ ‘ಪಾ’ ಗೆ ಕುದುರೆಗಳು ಬೇಕು. ನಾವೆಲ್ಲರೂ ಕುದುರೆಯೇ ಬೇಕೆಂದುಕೊಂಡರೆ, ಕುದುರೆಯನ್ನಲ್ಲದೆ ಬೇರೇನನ್ನೂ ಬಯಸದಿದ್ದರೆ...?”.

ಲಾರಾಳಿಗೆ ವಿಚಿತ್ರ ಎನಿಸುತ್ತದೆ. ಕುದುರೆಗಳು ಪ್ರತಿದಿನವೂ ಇರುವವು. ಪಾ ಗೆ ಕುದುರೆ ದೊರಕಿದರೆ ಅದು ಆತನಿಗಾಗಿ, ಆತನ ಕೆಲಸಕ್ಕಾಗಿ. ಸಾಂತಾ ಕ್ಲಾಸ್ ಮತ್ತು ಕುದುರೆಗಳನ್ನು ಒಟ್ಟಿಗೆ ಕೂಡಿಸುವುದು ಲಾರಳಿಗಾಗದು. ಆಗ ಎಲ್ಲ ಮಕ್ಕಳಂತೆ ಲಾರ ಕೇಳುವ ಪ್ರಶ್ನೆ ‘ಮಾ! ಸಾಂತಾ ಕ್ಲಾಸ್ ಇದ್ದಾನೆ ಅಲ್ಲವೇ?’. ಸಾಂತಾ ಕ್ಲಾಸ್ ಇದ್ದೇ ಇದ್ದಾನೆ ಎಂದು ದೃಢಪಡಿಸುವ ‘ಮಾ’ ಸಾಂತಾ ಕ್ಲಾಸ್‌ನನ್ನು ವಿವರಿಸುವ ಬಗೆ ನಮ್ಮ ಕೆಂಪು ಟೋಪಿ, ಹೇಸರಗತ್ತೆ, ಸ್ಲೆಜ್ ಗಾಡಿಗಳ ಚಿತ್ರಣವನ್ನು ಸಂಪೂರ್ಣವಾಗಿ ಬದಲಿಸಿಬಿಟ್ಟಿತ್ತು!

‘ಲಾರಾ, ಮೇರಿ! ನೀವು ದೊಡ್ಡವರಾದಂತೆ ಸಾಂತಾ ಕ್ಲಾಸ್‌ನ ಬಗ್ಗೆ ಹೆಚ್ಚು ತಿಳಿಯುತ್ತೀರಿ. ನೀವೀಗ ದೊಡ್ಡವರಾಗಿದೀರಿ. ಸಾಂತಾ ಕ್ಲಾಸ್ ಒಬ್ಬನೇ ಮನುಷ್ಯನಾಗಿರುವುದು ಅಸಾಧ್ಯವೆಂದು ನಿಮಗೆ ತಿಳಿಯದೇ? ಕ್ರಿಸ್‌ಮಸ್ ಹಿಂದಿನ ದಿನ ಅವನು ಎಲ್ಲಾ ಕಡೆ ಇರುತ್ತಾನೆ. ಯಾರಾದರೂ ಸ್ವಾರ್ಥವಿಲ್ಲದೆ ಇದ್ದರೆ, ಅದೇ ಸಾಂತಾ ಕ್ಲಾಸ್! ಕ್ರಿಸ್‌ಮಸ್ ಹಿಂದಿನ ದಿನ ಎಲ್ಲರೂ ನಿಸ್ವಾರ್ಥಿಗಳಾಗಿರಬೇಕು. ಆ ರಾತ್ರಿ ಸಾಂತಾ ಕ್ಲಾಸ್ ಎಲ್ಲೆಲ್ಲೂ ಇರುತ್ತಾನೆ. ಎಲ್ಲರೊಂದಿಗೂ ಇರುತ್ತಾನೆ. ಎಲ್ಲರೂ ಸ್ವಾರ್ಥ ಬಿಟ್ಟು, ಉಳಿದವರ ಸುಖವನ್ನು ಬಯಸಿರುತ್ತಾರೆ. ಬೆಳಿಗ್ಗೆಯೇ ಅದರ ಫಲ ಕಾಣುತ್ತದೆ!’

ಸಾಂತಾ ಕ್ಲಾಸ್‌ನ ಬಗೆಗಿನ ಈ ‘ಒಳ್ಳೆಯತನ’ ಚಿತ್ರಣ ಸಹಜವಾಗಿ ಮಕ್ಕಳಾಗಿದ್ದ ನಮಗೆ, ಕಥೆಯಲ್ಲಿದ್ದ ಲಾರಾಗೆ ಇಬ್ಬರಿಗೂ ಇಷ್ಟವಾಗಲಿಲ್ಲ. ಯಾವಾಗಲೂ ಒಳ್ಳೆಯವಳಾಗಿರುತ್ತಿದ್ದ ಲಾರಾಳ ಅಕ್ಕ ಮೇರಿ ಕೂಡ ಒಂದು ಮಾತೂ ಆಡುವುದಿಲ್ಲ! ಆ ರಾತ್ರಿ ಕ್ರಿಸ್‌ಮಸ್ ಮುನ್ನಾದಿನ. ನಿದ್ರೆಗೆ ಹೋಗುವಾಗ ಪ್ರಾರ್ಥಿಸುವಾಗ ಲಾರ ಬೇರೆಲ್ಲದರ ಜೊತೆಗೆ ‘ಕ್ರಿಸ್‌ಮಸ್ ಕುದುರೆಗಳ ಬಗ್ಗೆ ಮಾತ್ರ ನಾನು ಸಂತೋಷ ಪಡುವಂತೆ ಮಾಡು, ಆಮೆನ್’ ಎಂದು ಸೇರಿಸಿಕೊಳ್ಳುತ್ತಾಳೆ!

ಈಗ ದಿನಗಳು ಬದಲಾಗಿವೆ. ಕ್ರಿಸ್‌ಮಸ್ ಸಂಭ್ರಮ ಕೇವಲ ದೂರದ ಅಮೆರಿಕಾದಲ್ಲಷ್ಟೇ ಇಲ್ಲ. ಬೆಂಗಳೂರಿನ ಬ್ರಿಗೇಡ್ ರಸ್ತೆ, ಎಂ.ಜಿ. ರಸ್ತೆಗಳೂ ಕ್ರಿಸ್‌ಮಸ್ ನಕ್ಷತ್ರ, ಮರ, ಟೋಪಿಗಳಿಂದ ಕಂಗೊಳಿಸುತ್ತವೆ. ಕ್ರಿಸ್‌ಮಸ್‌ನ ಬಗೆಗಾಗಲೀ, ಕ್ರಿಸ್ತನ ಬಗೆಗಾಗಲೀ ಚಿಕ್ಕ ಮಕ್ಕಳಿಗೂ ಈಗ ಗೊತ್ತು. ಆದರೆ ಈಗಲೂ ಕ್ರಿಸ್‌ಮಸ್ ಬಂದಾಗ, ನಾನು ಒಂದೂ ಕ್ರಿಸ್‌ಮಸ್ ಆಚರಿಸದಿದ್ದಾಗ್ಯೂ ಬಾಲ್ಯದ ಈ ಕ್ರಿಸ್‌ಮಸ್ ನೆನಪುಗಳು ಮನಸ್ಸಿನ ಕಣ್ಣ ಮುಂದೆ ಸುಳಿಯುತ್ತವೆ. ಲಾರಾಳ ‘ನಮ್ಮ ಹೃದಯಗಳು ಬಾಲ್ಯದ ನೆನಪುಗಳಿಂದ ಮೃದುವಾಗುತ್ತವೆ, ಪ್ರೀತಿಯಿಂದ ತುಂಬಿ ಕರುಣಾಳುವಾಗುತ್ತದೆ. ಕ್ರಿಸ್‌ಮಸ್ ಸಮಯದಲ್ಲಿ ‘ಮಗು’ ವಾಗುವುದು ಇಡೀ ವರ್ಷ ಈ ಸ್ಫೂರ್ತಿಯನ್ನು ಕಾಯ್ದುಕೊಳ್ಳುವುದನ್ನು ಸಾಧ್ಯವಾಗಿಸುತ್ತದೆ!’ ಎಂಬ ಮಾತುಗಳು ನೆನಪಾಗುತ್ತವೆ.

ಮನೋವೈಜ್ಞಾನಿಕವಾಗಿ ಕಥೆಗಳು ಮಕ್ಕಳಿಗೆ ನೈತಿಕತೆಯನ್ನು ಕಲಿಸುವ ಅತ್ಯುತ್ತಮ ದಾರಿ ಎನ್ನಲಾಗುತ್ತದೆ. ಕಾಲ್ಪನಿಕವೋ, ನಿಜವೋ .. ಕ್ರಿಸ್‌ಮಸ್ ಸಾಂತಾ ಕ್ಲಾಸ್ ಆಗಲೀ, ನಮ್ಮ ಕಿನ್ನರ ದೇವತೆಗಳೇ ಆಗಲಿ, ಕೊಡುಗೆಯ ಆಸೆಗೇ ಆದರೂ ಒಳ್ಳೆಯದನ್ನು ಮಾಡಬೇಕೆಂಬ ಹಂಬಲವನ್ನು ಮಕ್ಕಳಲ್ಲಿ ಹುಟ್ಟಿಸುವಂತಾದರೆ ಅದು ಒಳ್ಳೆಯದೇ ತಾನೆ? ದೊಡ್ಡವರಿಗೆ ಸಾಂತಾ ಕ್ಲಾಸ್‌ನಂಥ ಕಿನ್ನರರು ಇಲ್ಲವೆಂಬ ಸ್ಪಷ್ಟ ಕಲ್ಪನೆ ಸಾಧ್ಯವಾದರೂ, ಆ ಕಲ್ಪನೆಯನ್ನು ಹುಟ್ಟು ಹಾಕಿರುವ ಹಿಂದಿನ ಉದ್ದೇಶವನ್ನು ನೆನಪಿಸಿಕೊಳ್ಳುವ ಸಮಯವಾಗಿ ವರ್ಷದ ಕೊನೆಯ ಈ ಮಾಸ ಕ್ರಿಸ್‌ಮಸ್ ನೆರವಾಗಬಹುದು. ಕವಿ ಕೆ.ಎಸ್. ನರಸಿಂಹಸ್ವಾಮಿ ಅವರ ಕ್ರಿಸ್‌ಮಸ್ ಕುರಿತ ‘ಡಿಸೆಂಬರಲ್ಲವೆ ಈಗ’ ಎಂಬ ಕವಿತೆಯ ಸಾಲುಗಳು ಈ ಸಂದರ್ಭದಲ್ಲಿ ಹೊಳೆಯುತ್ತವೆ.

‘ಪ್ರಾರ್ಥನೆಯ ಕೊರಳು ಬಾನಿಗೆ ಏರಬೇಕು  
ಎತ್ತರದ ಘಂಟೆಗಳು ಎಡೆಬಿಡದೆ ಮೊಳಗಬೇಕು  
ಶಾಂತಿ ನೆಲೆಸಬೇಕು  
ಬಯಲ ಹಸಿರಿನ ತುಂಬಾ ಹೂವಾಡಬೇಕು  
ಪ್ರೀತಿಯೇ ದೇವರೆಂದವನ ನೆನೆಯಬೇಕು  
ಕಣ್ಣಹನಿಗಳ ನಡುವೆ ಕೈಮುಗಿಯಬೇಕು.’

ಈಗ ಓದಿದ, ‘ಭಾರತೀಯ’ ಕವಿ ಬರೆದ ಈ ಕವಿತೆಯ ಸಾಲುಗಳಿಗೂ, ಬಾಲ್ಯದಲ್ಲಿ ಓದಿದ ಲಾರಾ ಇಂಗಾಲ್ಸ್ ವೈಲ್ಡರ್‌ಳ ಕ್ರಿಶ್ಚಿಯನ್ ಹಿನ್ನೆಲೆಯ ‘ಸತ್ಯ –ಪ್ರಾಮಾಣಿಕತೆ, ಚಿಕ್ಕ ಅನುಭವಗಳಲ್ಲಿ ಸಂತಸ ಕಾಣುವುದು, ದಾರಿ ತಪ್ಪಿದಾಗ ಧೈರ್ಯಗೆಡದಿರುವುದು, ಪ್ರೀತಿಸುವುದು, ಶಾಂತವಾಗಿರುವುದು ಈ ನಿಜ ಸಂಗತಿಗಳು ಎಂದಿಗೂ ಬದಲಾಗುವುದಿಲ್ಲ’ ಎಂಬ ಮಾತುಗಳಿಗೂ ಸಾಮ್ಯವಿದೆಯಲ್ಲಾ ಎಂದು ಅಚ್ಚರಿಯಾಗುತ್ತದೆ!